ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 10 ನೇ ಮಾರ್ಚ್, 2020

ಸಾರ್ವಜನಿಕ ಉದ್ದಿಮೆಗಳಲ್ಲಿ ಅನುಕಂಪದ ನೇಮಕಾತಿ

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):-

087 (770) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ಯಾವುವು ; (ವಿವರವಾದ ಮಾಹಿತಿ ನೀಡುವುದು)

(ಆ) ಈ ಉದ್ದಿಮೆಗಳ ದೈನಂದಿನ ಆಡಳಿತ ಹಾಗೂ ಇತರೆ ಕೆಲಸಕಾರ್ಯಗಳಿಗೆ ಸಂಬಂಧಿಸಿದ ಆಡಳಿತ ಇಲಾಖೆಗಳಾವುವು ; (ಉದ್ದಿಮೆವಾರು ವಿವರವಾದ ಮಾಹಿತಿ ನೀಡುವುದು)

(ಇ) ಈ ಸಾರ್ವಜನಿಕ ಉದ್ದಿಮೆಗಳಲ್ಲಿ ಅನುಕಂಪ ಆಧಾರಿತ ಹುದ್ದೆಗಳ ನೇಮಕಾತಿಗೆ ನಿರ್ಬಂಧ ಇರುವುದು ನಿಜವೇ ;

(ಈ) ಹಾಗಿದ್ದಲ್ಲಿ, ಈ ನಿರ್ಬಂಧ ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಉ) ಅನುಕಂಪ ಆಧಾರಿತ ಹುದ್ದೆಗಳ ನೇಮಕಾತಿಗೆ ನಿರ್ಬಂಧ ಹಾಕಿ ನೇರ ನೇಮಕಾತಿಗಳಿಗೆ ನಿರ್ಬಂಧ ಹಾಕದಿರಲು ಕಾರಣಗಳೇನು ?